ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5017/2018

ಪ್ರಾ ಸಾ 1 ಚಾ ಸಾ 5

ಹೆಸರುಃ ಪ್ರಭಾಕರ

ತಂದೆಯ ಹೆಸರುಃ ನಂಜುಂಡಯ್ಯ

ವಯಸ್ಸುಃ 40 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಗಂಜಾಂ, ಶ್ರೀರಂಗಪಟ್ಟಣ ತಾಲ್ಲೂಕು.

ಸಾಕ್ಷಿಯನ್ನು ದಿಃ 17.04.2021 ರಂದು ನ್ಯಾಯಾಲಯಕ್ಕೆ ಕರೆಸಿ
ಪ್ರಮಾಣವಚನ ಮಾಡಿಸಲಾಯ್ತು.

<u>**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**</u>

1.ಮೃತ ಜಯಕುಮಾರಿ ಚಾಸಾ 1 ವಿಜಯಂದ್ರರವರ ಸಹೋದರಿಯಾಗಿದ್ದು ಅವರು ಸುಮಾರು 4 ವರ್ಷಗಳ ಹಿಂದೆ ಅರಕೆರೆ ಗ್ರಾಮದಲ್ಲಿರುವ ಅವರ ಗಂಡನ ಮನೆಯಲ್ಲಿ ಪ್ಯಾನ್ ಗೆ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ. ನಾನು ಸ್ದಳಕ್ಕೆ ಹೋಗಿ ನೋಡುವಷ್ಟರಲ್ಲಿ ಮೃತ ದೇಹವನ್ನು ದಿವಾನ್ ಕಾಟ್ ಮೇಲೆ ಮಲಗಿಸಿದ್ದರು ನಾನು ಮತ್ತು ಚಾಸಾ 1 ರವರು ಸೇರಿ ಒಟ್ಟಿಗೆ ಮೃತೆಯ ಗಂಡನ ಮನೆಗೆ ಹೋಗಿದ್ದೆವು. ನಂತರ ಮೃತ ದೇಹವನ್ನು

ಅರಕೆರೆ ಆಸ್ಪತ್ರೆಗೆ ಸಾಗಿಸಲಾಗಿರುತ್ತದೆ. ಆಸ್ಪತ್ರೆಯಲ್ಲಿ ಪೊಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಾನು ಈಗ ನೋಡುತ್ತಿದ್ದು ಅದು ಶವ ತನಿಖಾ ವರದಿಯಾಗಿದ್ದು ಸದರಿ ಶವ ತನಿಖಾ ವರದಿಯನ್ನು ನಿ ಪಿ 1 ಎಂತಲೂ, ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿ ಪಿ 1 ಎ ಎಂದು ಗುರುತಿಸಲಾಯ್ತು. ನಿ ಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ ಪಿ 1 ರಲ್ಲಿ ಬರೆದ ವಿಷಯಗಳನ್ನು ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ. ಈಗ ನನಗೆ ತೋರಿಸಿದ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಗೆ ತೋರಿಸಿದ ಸದರಿ ಇನ್ನೊಂದು ದಾಖಲೆ ಸ್ಥಳ ಮಹಜರು ಆಗಿದ್ದು ಅದನ್ನು ನಿ ಪಿ 2 ಎಂತಲೂ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2 ಎ ಎಂದು ಗುರುತಿಸಲಾಯ್ತು. ನಿ ಪಿ 2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ. ನಿ ಪಿ 2 ರಲ್ಲಿರುವ ಒಕ್ಕಣೆಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಮೃತಳು ನೇಣು ಹಾಕಲು ಉಪಯೋಗಿಸಿದ್ದ ಸೀರೆಯನ್ನಾಗಲಿ, ಮೃತೆ ಮತ್ತು ಆರೋಪಿಯ ಮದುವೆಯ ಆಮಂತ್ರಣ ಪತ್ರಿಕೆಯನ್ನಾಗಲಿ ಮತ್ತು ಅವರುಗಳ ಕುಟುಂಬದ ಫೋಟೋಗಳನ್ನಾಗಲಿ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈಗ ನನಗೆ ತೋರಿಸಿದ ಫೋಟೋದಲ್ಲಿ ನಾನು, ಪೊಲೀಸ್ ಅಧಿಕಾರಿ ಮತ್ತಿಬ್ಬರು ಮತ್ತು ಮೃತೆಯ ಶವ ಕಂಡು ಬರುತ್ತದೆ. ಸಾಕ್ಷಿಯು ಗುರುತಿಸಿದ ಫೋಟೋವನ್ನು ನಿ ಪಿ 3 ಎಂದು ಗುರುತಿಸಲಾಯ್ತು. ಈಗ ನನಗೆ ತೋರಿಸಿದ ಎರಡು ಬವಚಿತ್ರಗಳನ್ನು ಮೃತೆ ನೇಣು ಹಾಕಿಕೊಂಡು ಸತ್ತ ಮನೆಯಲ್ಲಿ ತೆಗೆಯಲಾಗಿರುತ್ತದೆ. ಸದರಿ ಮೂರು ಬಾವಚಿತ್ರಗಳ ಪೈಕಿ ಎರಡು

ಬಾವಚಿತ್ರಗಳಲ್ಲಿ ನಾನು ಇದ್ದೇನೆ. ಸಾಕ್ಷಿ ಗುರುತಿಸಿದ ಸದರಿ ಮೂರು ಬಾವಚಿತ್ರಗಳನ್ನು ಒಟ್ಟಾಗಿ ನಿ ಪಿ 4 ಎಂದು ಗುರುತಿಸಲಾಯ್ತು. ಸದರಿ ಬಾವಚಿತ್ರಗಳಿಗೆ ಸಂಬಂಧಪಟ್ಟಂಥಹ ಸಿ ಡಿ ಯನ್ನು ನಿ ಪಿ 5 ಎಂದು ಗುರುತಿಸಲಾಯ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯ್ತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

2. ಶವಾಗಾರದಲ್ಲಿ ನಾನು ಮೃತಳ ಶವವನ್ನು ನೋಡಿದಾಗ ಶವದ ಬಲಗೈ ಮೇಲೆ ಸುಮಾರು 2 ಇಂಚು ಉದ್ದದ ಕತ್ತರಿಸಿದ ಗಾಯ, ಕುತ್ತಿಗೆಯಲ್ಲಿ ಸುಮಾರು 6 x 1.5 ಇಂಚು ಉದ್ದಗಲದ ಲಿಗೇಚರ್ ಮಾರ್ಕ ಇತ್ತು ಎಂದರೆ ಸರಿಯಲ್ಲ. ನನ್ನ ಮುಂದೆ ಪೊಲೀಸರು ಶವದ ಮೇಲೆ ಪರೀಕ್ಷೆ ಮಾಡಿ ನಿ ಪಿ 1 ರಂತೆ ಶವತನಿಖಾ ವರದಿಯನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ. ನಾನು ನಿ ಪಿ 1 ಶವತನಿಖಾ ವರದಿಯಲ್ಲಿ ಇರುವ ಅಂಶಗಳನ್ನು ಓದಿ ತಿಳಿದುಕೊಂಡು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್. ಮೃತ ಜಯಕುಮಾರಿಯನ್ನು ಆರೋಪಿಯು 2005 ರಲ್ಲಿ ಮದುವೆ ಮಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಕೆಲವು ವರ್ಷಗಳಿಂದ ಆರೋಪಿಯು ಸಾವಿತ್ರಿ ಎನ್ನುವ ಹೆಂಗಸಿನೊಂದಿಗೆ ಅಕ್ರಮ ಸಂಬಂಧ ಹೊಂದಿ ಮೃತಳಿಗೆ

ಮಾನಸಿಕ ಹಾಗೂ ದೈಹಿಕ ಹಿಂಸೆ ಕೊಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ದಿಃ 11.08.2017 ರಂದು ಆರೋಪಿಯು ಮೃತಳೊಂದಿಗೆ ಜಗಳ ಮಾಡಿಕೊಂಡು ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿ ನೀನು ಬದುಕಿರುವುದಕ್ಕಿಂತ ಎಲ್ಲಾದರೂ ಹೋಗಿ ಸಾಯಿ ಎಂದು ಬೈದಿದ್ದರಿಂದ ಮೃತೆ ಮನನೊಂದು ತನ್ನ ಗಂಡನ ಮನೆಯಲ್ಲಿಯೇ ರೂಂ ನಲ್ಲಿದ್ದ ಫ್ಯಾನ್ ಗೆ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

3. ದಿಃ 14.08.2017 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಪೊಲೀಸರು ಆರೋಪಿ ಮತ್ತು ಮೃತಳು ವಾಸ ಮಾಡುತ್ತಿದ್ದ ಅರಕೆರೆಯಲ್ಲಿರುವ ಮನೆಗೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಚಾ ಸಾ 1 ವಿಜೇಂದ್ರ ರವರು ಸಹ ಹಾಜರಿದ್ದು ನನ್ನ ಹಾಗೂ ಚಾ ಸಾ 12 ರವರ ಸಮಕ್ಷಮ ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಿರ್ಯಾದಿಯು ನಮ್ಮ ಮುಂದೆ ಮೃತಳು ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದ ಸೀರೆಯನ್ನು, ಮೃತಳ ಮದುವೆಯ ಲಗ್ನ ಪತ್ರಿಕೆಯನ್ನು ಮತ್ತು ಆರೋಪಿ ಮತ್ತು ಮೃತೆ ತಮ್ಮ ಮಕ್ಕಳೊಂದಿಗೆ ತೆಗೆಸಿಕೊಂಡಿದ್ದ ಪೋಟೋವನ್ನು ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ನಮ್ಮ ಸಮಕ್ಷಮ ನಿ ಪಿ 2 ರಂತೆ ಸ್ಥಳ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿ ಪಿ 2 ರಲ್ಲಿ ಬರೆದಿರುವ ಅಂಶಗಳನ್ನು ತಿಳಿದುಕೊಂಡು ನಾನು ಸ್ಥಳದಲ್ಲಿಯೇ

ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮದುವೆಯ ಲಗ್ನ ಪತ್ರಿಕೆ ಮತ್ತು ಮಹಜರು ಸಮಯದಲ್ಲಿ ಹಾಜರುಪಡಿಸಿದೆ ಎನ್ನಲಾದ ಪೋಟೋವನ್ನು ತೋರಿಸಲಾಗಿ ಸಾಕ್ಷಿ ಗುರುತಿಸಿರುವುದಿಲ್ಲ. ನಿ ಪಿ 1 ಮತ್ತು ನಿ ಪಿ 2 ರಲ್ಲಿರುವ ಅಂಶಗಳೆಲ್ಲ ನಾನು ತಿಳಿದುಕೊಂಡಿದ್ದರೂ ಸಹ ಆರೋಪಿಗೆ ಸಹಾಯವಾಗಲೆಂದು ನನಗೆ ಏನು ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಆರ್.ವಿ.ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)